ಯಥಾವತ್ತಾಗಿ ಮೈದೋರಿರುತ್ತವೆ. ಚಾಮ್‌ಸ್ಕಿ ತನ್ನೆಲ್ಲ ವೈಚಾರಿಕ ಮಾದರಿಗಳನ್ನು ರೂಪಿಸಿಕೊಳ್ಳಲು 'ನಿರಂಕುಶಮತಿ'ತ್ವವನ್ನು (Anarchism) ತನ್ನ ತಾತ್ವಿಕ ಚೌಕಟ್ಟಿನ ಮೂಲ ಬೇರನ್ನಾಗಿ ಬಳಸಿಕೊಳ್ಳುವುದು ವಿಶೇಷ. ಈ ವೈಚಾರಿಕ ವಿದ್ಯಮಾನ ಚಾಮ್‌ಸ್ಕಿಯ ತಾತ್ವಿಕ ವಿನ್ಯಾಸಕ್ಕೆ ದೊಡ್ಡಮಟ್ಟದ ಆಯಾಮವನ್ನು ನೀಡಿರುತ್ತದೆ.

ಈ ಹೊತ್ತಿನ ರಾಜಕೀಯ, ಸಾಮಾಜಿಕ ಇಲ್ಲವೇ ಆರ್ಥಿಕ ಬಿಕ್ಕಟ್ಟುಗಳನ್ನು ಅರ್ಥೈಸಿಕೊಳ್ಳಲು ನಾವು ಅನುಸರಿಸುವ ವಿಶ್ಲೇಷಣಾ ವಿಧಿ ವಿಧಾನಗಳಲ್ಲಿ ಮತ್ತು ಪರಿಕಲ್ಪನೆಗಳ ಸ್ವರೂಪದಲ್ಲಿ ನಮಗೆ ತಾತ್ವಿಕ ಸ್ಪಷ್ಟತೆಯ ಕೊರತೆ ಇರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಚಾಮ್‌ಸ್ಕಿ ತನ್ನ ರಾಜಕೀಯ ಹಾಗೂ ಇತರೆ ವೈಚಾರಿಕ ಚರ್ಚೆಗಳಲ್ಲಿ ಅನುಸರಿಸುವ ತಾತ್ವಿಕ ಚೌಕಟ್ಟುಗಳನ್ನು ನಾವು ಈಗ ರೂಪಿಸಿಕೊಳ್ಳಲು ಆತನ ಚಿಂತನೆಗಳಿಂದ ಯಾವೆಲ್ಲ ಪರಿಕರಗಳನ್ನು ಪಡೆಯುವ ಜರೂರಿದೆ ಎಂಬ ವಾಸ್ತವವನ್ನು ಅರಿಯಬೇಕಿದೆ. ಚಾಮ್‌ಸ್ಕಿಯ ತಾತ್ವಿಕ ಮಾದರಿಗಳನ್ನು ಯಥಾವತ್ತಾಗಿ ಕನ್ನಡಲ್ಲಿ ನೆಲೆಗೊಳಿಸಬೇಕು ಎಂದು ಹೇಳುವುದು ನನ್ನ ಉದ್ದೇಶವಲ್ಲ. ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ವಿದ್ಯಮಾನಗಳನ್ನು ಚರ್ಚಿಸಲು ಮೆಥಡಾಲಜಿ ಮತ್ತು ಪರಿಕಲ್ಪನೆಗಳು ಎಂಬೆರಡು ತಾತ್ವಿಕತೆಯ ನೆಲೆಗಳು ನಮಗೆ ಬೇಕಾಗುತ್ತವೆ. ದಿಟ ಚಾಮ್‌ಸ್ಕಿಯ ರಾಜಕೀಯ ಚಿಂತನೆಗಳನ್ನು ಪರಿಶೀಲಿಸಿ ನೋಡಿದರೆ, ಈ ಚಿಂತನೆಗಳು ಕೇವಲ ಮಾಹಿತಿಯಿಂದ ತುಂಬಿಕೊಂಡಂತೆ ಮೇಲ್ನೋಟಕ್ಕೆ ಭಾಸವಾಗುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ, ಮನುಷ್ಯನ ಇಡೀ ಗ್ರಹಿಕೆ ಮತ್ತು ಆಲೋಚನೆಗೆ ನೆಲೆಯಾಗಿರುವ ಅರಿವು (ಕಾಗ್ನಿಶನ್) ಹೇಗೆ ಕೆಲಸ ಮಾಡುತ್ತದೆ ಅನ್ನುವ ವಿದ್ಯಮಾನವನ್ನು ಚಾಮ್‌ಸ್ಕಿ ಅತ್ಯಂತ ನಿಖರವಾಗಿ ಅರಿತಿದ್ದರಿಂದ, ತನ್ನ ಚರ್ಚೆಗಳಲ್ಲಿ ಅಗಾಧವಾಗಿ ಬಳಸಿಕೊಳ್ಳುವ ಯಾವುದೇ ಮಾಹಿತಿಯನ್ನು ಕೇವಲ ಮಾಹಿತಿಯನ್ನಾಗಿ ಮಾತ್ರ ಮಂಡಿಸುವುದಿಲ್ಲ. ಅದನ್ನೊಂದು ಚಿಂತನೆಯ ವಿನ್ಯಾಸವನ್ನಾಗಿ ಮತ್ತು ಆಲೋಚನಾ ಕ್ರಮವನ್ನಾಗಿ ಇಲ್ಲವೇ ತಾತ್ವಿಕ ಚೌಕಟ್ಟನ್ನಾಗಿ ರೂಪಿಸುತ್ತಾನೆ. ಉದಾಹರಣೆಗೆ, ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಪರಿಣಾಮಗಳು ಸಾಮಾನ್ಯ ಜನರ ಬದುಕಿನ ಮೇಲೆ ಹೇಗೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತವೆ ಎಂಬುದನ್ನು ಮನಗಾಣಲು ಚಾಮ್‌ಸ್ಕಿ ಇಂತಹುದೇ ವಿಧಾನವನ್ನು ಅನುಸರಿಸುತ್ತಾರೆ. ಅಂದರೆ ಯಾವುದೇ ವಿದ್ಯಮಾನಕ್ಕೆ ಸಂಬಂಧಿಸಿದ ವಿಚಾರವನ್ನು ವಿಶ್ಲೇಷಿಸುವಾಗಲೂ ಚಾಮ್‌ಸ್ಕಿ ರೂಪಿಸಿಕೊಳ್ಳುವ ವೈಚಾರಿಕ ನಿಲುವುಗಳು ನಿರಂಕುಶಮತಿತ್ವ (Anarchism) ಹಾಗೂ ಅರಿವಿನ ವಿಜ್ಞಾನವನ್ನು (Cognitive Science) ನೆಲೆಯಾಗಿಸಿಕೊಂಡಿರುತ್ತವೆ.

ಭಾಷಾಶಾಸ್ತ್ರದ ಕುರಿತ ಚರ್ಚೆಗಳಾಗಿರಬಹುದು ಅಥವಾ ರಾಜಕೀಯ ವಿಶ್ಲೇಷಣೆಗಳಾಗಿರಬಹುದು, ಪ್ರತಿಯೊಂದು ಸನ್ನಿವೇಶದಲ್ಲಿ ಈ ತಾತ್ವಿಕತೆಯನ್ನು ಚಾಮ್‌ಸ್ಕಿಯಲ್ಲಿ ಕಾಣುತ್ತೇವೆ. ಬಹುತೇಕ ಸನ್ನಿವೇಶದಲ್ಲಿ ಚಾಮ್‌ಸ್ಕಿ ತಾನೇ ಹೇಳಿಕೊಂಡಂತೆ, ಆತನ ರಾಜಕೀಯ ವಿಶ್ಲೇಷಣೆಗೂ ಮತ್ತು ಭಾಷಾಶಾಸ್ತ್ರೀಯ ಚಿಂತನೆಗೂ ಯಾವುದೇ ಬಗೆಯ ಸಂಬಂಧಗಳು ಇರುವುದಿಲ್ಲ. ಇವೆರಡೂ ಮಾದರಿಯ ಚರ್ಚೆ ಅಥವಾ ವಿಶ್ಲೇಷಣೆಗಳಲ್ಲಿ ನೇರವಾದ ಸಂಬಂಧ ಇದೆಯೆಂದು ನನ್ನ ವಾದವಲ್ಲ. ಚಾಮ್‌ಸ್ಕಿಯ ಯಾವುದೇ ಚಿಂತನೆಯ ತಳಹದಿ ಮಾತ್ರ ನಿರಂಕುಶಮತಿತ್ವ ಮತ್ತು ಅರಿವಿನ ವಿಜ್ಞಾನವೇ ಆಗಿರುತ್ತವೆ ಎನ್ನುವುದು ಆತನ ವಿಶ್ಲೇಷಣೆಗಳಲ್ಲಿ ಎದ್ದು ಕಾಣುತ್ತವೆ. ಭಾರತ ಅಥವಾ ಕರ್ನಾಟಕದ ಭಾಷಾಶಾಸ್ತ್ರದ ತಿಳಿವಳಿಕೆಯನ್ನು ರೂಪಿಸುವಾಗ ಇಲ್ಲವೇ ಸಾಮಾಜಿಕ ನಿಲುವುಗಳಿಗೆ ಸಂಬಂಧಿಸಿದ ಚರ್ಚೆಗಳನ್ನು ನೆಲೆಗೊಳಿಸುವ ಪ್ರಕ್ರಿಯೆಯಲ್ಲಿ ಪ್ರಖರವಾದ ಮತ್ತು ನಿಖರವಾದ ತಾತ್ವಿಕತೆಯ ಕೊರತೆಯನ್ನು ನಾನು ಮನಗಂಡಿದ್ದೇನೆ. ಇಂತಹದೊಂದು ಕೊರತೆಯನ್ನು ನೀಗಿಸುವಲ್ಲಿ ಚಾಮ್‌ಸ್ಕಿಯ ಚಿಂತನೆಗಳು ಹೇಗೆ ನಮಗೆ ಒತ್ತಾಸೆ ಆಗಬಲ್ಲವು ಅನ್ನುವ ಇರಾದೆಯನ್ನು ಇಲ್ಲಿ ಹೊಂದಲಾಗಿದೆ.

**ಆಧುನಿಕ ಭಾಷಾಶಾಸ್ತ್ರದ ಹರಿಕಾರ**

ಆಧುನಿಕ ಭಾಷಾಶಾಸ್ತ್ರದ ಹರಿಕಾರನೆಂದೇ ನೋಮ್ ಚಾಮ್‌ಸ್ಕಿ ಹೆಸರುವಾಸಿಯಾಗಿದ್ದಾರೆ. ನುಡಿಯ ಬಗೆಗಿನ ಅವರ ತಾತ್ವಿಕ ಶೋಧಗಳು ಭಾಷಾಶಾಸ್ತ್ರದ ಅಧ್ಯಯನದಲ್ಲಿ ಕ್ರಾಂತಿಯನ್ನೇ ಉಂಟುಮಾಡಿರುತ್ತವೆ. ಭಾರತದ ಭಾಷಾ ಅಧ್ಯಯನದ